1487(2121)

ಶ್ರೀ ಚಿಮ್ಮನಕಟ್ಟಿ ಬಾಲಪ್ಪ ಭೀಮಪ್ಪ(ಬಾದಾಮಿ): ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬಾದಾಮಿ ತಾಲ್ಲೂಕು ಉಗಲಾಟ ಗ್ರಾಮದಲ್ಲಿ ಬಹಳ ವರ್ಷಗಳಿಂದ ಶ್ರೀ ಕಾಳೀದಾಸ ಶಿಕ್ಷಣ ಸಂಸ್ಥೆಯವರು ಪ್ರೌಢಶಾಲೆಯನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ವಿದ್ಯಾರ್ಥಿಗಳ ವಿದ್ಯಾರ್ಜನೆಗಾಗಿ ಸಂಸ್ಥೆಯವರು ಪೂರ್ವ ಮೆಟ್ರಿಕ್‌ಹಾಸ್ಟಲ್ ಕೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಪ್ರಸ್ತುತ ಈ ಸಂಸ್ಥೆಗೆ ವಸತಿನಿಲಯ ಮಂಜೂರು ಮಾಡಲಾಗುವುದೇ?

ಶ್ರೀ ಮಾಲಿಕಯ್ಯ ವಿ.ಗುತ್ತೇದಾರ್(ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು):

ಅ) ಹೌದು.

ಆ) ಹೌದು.

ಇ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಬಾದಾಮಿ ತಾಲ್ಲೂಕಿನ ಕೆರೂರು ಪಟ್ಟಣದ ಕುಡಿಯುವ ನೀರಿನ ಶಾಶ್ವತ ಮಂಜೂರಾತಿ.

1488(2123)

ಶ್ರೀ ಚಿಮ್ಮನಕಟ್ಟಿ ಬಾಲಪ್ಪ ಭೀಮಪ್ಪ(ಬಾದಾಮಿ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1. ಬಾದಾಮಿ ತಾಲ್ಲೂಕಿನ ಕೆರೂರು ಪಟ್ಟಣದ ಕುಡಿಯುವ ನೀರಿನ ಶಾಶ್ವತ ಯೋಜನೆಗೆ ಮಂಜೂರಾತಿ ನೀಡಲಾಗಿದೆಯೆ? ಹಾಗಿದ್ದಲ್ಲಿ ಯಾವಾಗ?

2. ಈ ಯೋಜನೆಯ ಕಾಮಗಾರಿ ಯಾವ ಹಂತದಲ್ಲಿದೆ?

3. ಈ ಕಾಮಗಾರಿಯನ್ನು ಶೀಘ್ರವಾಗಿ ಪೂರೈಸಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸಿಕೊಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಂ.ಎಸ್.ಪಾಟೀಲ್(ನಗರಾಭಿವೃದ್ಧಿ ಸಚಿವರು):

1. ಸರ್ಕಾರವು ತನ್ನ ಆಜ್ಞೆ ಸಂಖ್ಯೆ.ನಅಇ 19 ಯುಡಬ್ಲ್ಯುಎಸ್ 95 ದಿನಾಂಕ 16.11.95 ರಲ್ಲಿ 45.79 ಲಕ್ಷ ರೂ.ಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದೆ.

2. ಈ ಯೋಜನೆಯ ಕಾಮಗಾರಿಗಳನ್ನು ಮುಗಿಸಿ ಫೆಬ್ರವರಿ 99ರಲ್ಲಿ ಚಾಲ್ತಿಗೊಳಿಸಲಾಗಿದೆ.

3. ಭಾಗ(2)ರ ಉತ್ತರದಿಂದ ಉದ್ಭವಿಸುವುದಿಲ್ಲ.

ಶಿವಮೊಗ್ಗ ನಗರದ 100 ಅಡಿ ವರ್ತುಲ ರಸ್ತೆ.

1489(2106)

ಶ್ರೀ ಕೆ.ಎಸ್.ಈಶ್ವರಪ್ಪ(ಶಿವಮೊಗ್ಗ):ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ)ಶಿವಮೊಗ್ಗ ನಗರದ ಬಿ.ಹೆಚ್.ರಸ್ತೆಯಿಂದ ನಿರ್ಮಾಣ ಮಾಡಿರುವ 100 ಅಡಿ ಅಗಲದ ವರ್ತುಲ ರಸ್ತೆಗೆ ಶಿವಮೊಗ್ಗ ನಗರಾಭಿವೃದ್ಧಿ ಮಂಡಳಿಯಿಂದ ಕಳೆದ ನಾಲ್ಕು ವರ್ಷಗಳಲ್ಲಿ ಮಾಡಿರುವ ವೆಚ್ಚ ಎಷ್ಟು? (ವಾರ್ಷಿಕ ವಿವರ ನೀಡುವುದು)

ಆ)ಕಾಮಗಾರಿಗಳನ್ನು ಕೈಗೊಂಡ ಗುತ್ತಿಗೆದಾರರ ಹೆಸರು ಮತ್ತು ಕಾಮಗಾರಿಗಳ ವಿವರ (ಕಳೆದ 4 ವರ್ಷಗಳು) ಈ ಕಾಮಗಾರಿಗಳ ಲೋಪದೋಷಗಳು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಸರ್ಕಾರವು ಈ ಬಗ್ಗೆ ತೆಗೆದುಕೊಂಡ ಕ್ರಮವೇನು?

ಶ್ರೀ ಎಂ.ಎಸ್.ಪಾಟೀಲ್(ನಗರಾಭಿವೃದ್ಧಿ ಸಚಿವರು):

ಅ) ಶಿವಮೊಗ್ಗ ನಗರದ ಬಿ.ಹೆಚ್.ರಸ್ತೆಯಿಂದ ನಿರ್ಮಾಣ ಮಾಡಿರುವ 100 ಅಡಿ ರಸ್ತೆ ಅಗಲದ ವರ್ತುಲ ರಸ್ತೆಗೆ ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದಿಂದ ಕಳೆದ ನಾಲ್ಕು ವರ್ಷಗಳಲ್ಲಿ 87,01,162.00 ರೂ.ಗಳು ವೆಚ್ಚವಾಗಿರುತ್ತದೆ. ವಾರ್ಷಿಕವಾರು ಖರ್ಚಿನ ವಿವರ ಈ ಕೆಳಕಂಡಂತೆ ಇರುತ್ತದೆ.